ಆರ್‌ಬಿಐ / 2006-07 / 171
ಉಲ್ಲೇಖ. ಸಂಖ್ಯೆ. ಡಿಜಿಬಿಎ. ಸಿಡಿಡಿ. ಸಂಖ್ಯೆ ಹೆಚ್. 7667/15.15.001/2006-07

ನವೆಂಬರ್ 10, 2006

ಪ್ರಧಾನ ವ್ಯವಸ್ಥಾಪಕರು
ಸರ್ಕಾರಿ ಲೆಕ್ಕ ಇಲಾಖೆ, ಪ್ರಧಾನ ಕಛೇರಿ
ಭಾರತೀಯ ಸ್ಟೇಟ್ ಬ್ಯಾಂಕ್/ಸ್ಟೇಟ್ ಬ್ಯಾಂಕ್ ಆಫ್ ಇಂದೂರು/ಸ್ಟೇಟ್ ಬ್ಯಾಂಕ್ ಆಫ್ ಪಾಟಿಯಾಲ್

/ಸ್ಟೇಟ್ ಬ್ಯಾಂಕ್ ಆಫ್ ಬಿಕನೇರ್ ಮತ್ತು ಜೈಪುರ್//ಸ್ಟೇಟ್ ಬ್ಯಾಂಕ್ ಆಫ್ ಸೌರಾಷ್ಟ್ರ /ಸ್ಟೇಟ್ ಬ್ಯಾಂಕ್ ಆಫ್ ತಿರುವಾಂಕೂರು/ಸ್ಟೇಟ್ ಬ್ಯಾಂಕ್ ಆಫ್ ಹೈದಾರಾಬಾದ್/ಸ್ಟೇಟ್ ಬ್ಯಾಂಕ್ ಆಫ್ ಮೈಸೂರು/ ಅಲಹಾಬಾದ್ ಬ್ಯಾಂಕ್/ಬ್ಯಾಂಕ್ ಆಫ್ ಬರೋಡ /ಬ್ಯಾಂಕ್ ಆಫ್ ಇಂಡಿಯಾ/ಬ್ಯಾಂಕ್ ಆಫ್ ಮಹಾರಾಷ್ಟ್ರ/ಕೆನರಾಬ್ಯಾಂಕ್/ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ/ ಕಾರ್ಪೊರೇಷನ್ ಬ್ಯಾಂಕ್ /ದೇನಾ ಬ್ಯಾಂಕ್/ ಇಂಡಿಯನ್ ಬ್ಯಾಂಕ್/ ಇಂಡಿಯನ್ ಓವ್‌ರ್‌ಸೀಸ್ ಬ್ಯಾಂಕ್ / ಪಂಜಾಬ್ ನ್ಯಾಷನಲ್ ಬ್ಯಾಂಕ್/ ಸಿಂಡಿಕೇಟ್ ಬ್ಯಾಂಕ್/ ಯೂಕೋ ಬ್ಯಾಂಕ್/ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ/ ಯುನೈಟೆಡ್ ಬ್ಯಾಂಕ್ ಆಫ್ ಇಂಡಿಯಾ/ ಐಸಿಐಸಿಐ ಬ್ಯಾಂಕ್ ಲಿಮಿಟೆಡ್/ ವಿಜಯಾ ಬ್ಯಾಂಕ್

ಮಾನ್ಯರೆ,

<u>ಹಿರಿಯ ನಾಗರೀಕರ ಉಳಿತಾಯ ಯೋಜನೆ 2004 ರಡಿಯಲ್ಲಿ ಪಾವತಿಸುವ ಬಡ್ಡಿಯಲ್ಲಿ ಮೂಲದಲ್ಲಿ ತೆರಿಗೆ ಕಡಿತ-ನಮೂನೆ ಸಂಖ್ಯೆ 15 ಹೆಚ್ ಮತ್ತು 15 ಜಿ ಯನ್ನು ಬ್ಯಾಂಕುಗಳು ಸ್ವೀಕರಿಸದಿರುವುದು</u>

ಹಿರಿಯ ನಾಗರಿಕರ ಉಳಿತಾಯ ಯೋಜನೆ 2004 ರ ಸಂಬಂಧದಲ್ಲಿ ಕೆಲವು ವಿಷಯಗಳಿಗೆ ಸ್ಪಷ್ಟೀಕರಣ ನೀಡುವ ನಮ್ಮ ಸುತ್ತೋಲೆ ಸಂಖ್ಯೆ ಆರ್‌ಬಿಐ / 2005-06 / 431 ಉಲ್ಲೇಖ. ಸಂಖ್ಯೆ. ಡಿಜಿಬಿಎ. ಸಿಡಿಡಿ. ಸಂಖ್ಯೆ ಹೆಚ್.
0692/15.15.001/2005-06 ದಿನಾಂಕ 28, ಜೂನ್ 2006 ರನ್ನು ದಯವಿಟ್ಟು ಗಮನಿಸಿರಿ.

2. ಏಜೆನ್ಸಿ ಬ್ಯಾಂಕುಗಳು ನಮೂನೆ ಸಂಖ್ಯೆ. 15 ಜಿ ಮತ್ತು 15 ಹೆಚ್ ಗಳನ್ನು ಒಪ್ಪಿಕೊಳ್ಳದ ಬಗ್ಗೆ ಮತ್ತು ಇ೦ತಹ ನಮೂನೆಯನ್ನು ಠೇವಣಿದಾರರು ಒದಗಿಸಿದ ಪಕ್ಷದಲ್ಲೂ ಬಡ್ಡಿಯ ಮೊತ್ತದಿಂದ ತೆರಿಗೆಯನ್ನು ಕಳೆಯುತ್ತಿರುವುದರ ಬಗ್ಗೆ ದೂರುಗಳನ್ನು, ಕುಂದುಕೊರತೆಗಳನ್ನು ಇನ್ನೂ ಸ್ವೀಕರಿಸುತ್ತಿರುವ ಬಗ್ಗೆ ಭಾರತ ಸರ್ಕಾರ ಹಣಕಾಸು ಮಂತ್ರಾಲಯ, ಹೊಸದೆಹಲಿಯಿಂದ ನಮಗೆ ಪತ್ರ ಬಂದಿದೆ.

3. ಭಾರತ ಸರ್ಕಾರದ ಕಛೇರಿ ವಿಜ್ಞಾಪನ ಪತ್ರ ಸಂಖ್ಯೆ 2/8/2005 ಎನ್ ಎಸ್-II ದಿನಾಂಕ 23 ಜೂನ್ 2006 ರಲ್ಲಿ ವಿಧಿಸಿದಂತೆ ಮತ್ತು ಅದರ ನಕಲನ್ನು ನಿಮಗೆ ಈ ಮೊದಲೇ ಕಳುಹಿಸಿದಂತೆ,

ಠೇವಣಿದಾರರು ಎಲ್ಲಿ ನಮೂನೆ ಸಂಖ್ಯೆ 15 ಹೆಚ್ ಮತ್ತು 15 ಜಿ ಅಥವಾ ಆದಾಯ ತೆರಿಗೆ ಕಾಯಿದೆ 1961 ರ ಪ್ರಕರಣ 197(1) ರಡಿಯಲ್ಲಿನ ಪ್ರಮಾಣಪತ್ರ ಯಾವುದನ್ನು ನೀಡುತ್ತಾರೋ, ಅಂತಹವರಿಗೆ ಏಜೆನ್ಸಿ ಬ್ಯಾಂಕುಗಳು ಮೂಲ ಆದಾಯದಲ್ಲಿ ಯಾವುದೇ ತೆರಿಗೆಯನ್ನು ಕಳೆಯಬಾರದೆಂದು ನಾವು ಪುನರುಚ್ಛರಿಸುತ್ತಿದ್ದೇವೆ.

4. ಈ ಸುತ್ತೋಲೆಯಲ್ಲಿರುವ ವಿಷಯಗಳನ್ನು ನಿಮ್ಮ ಬ್ಯಾಂಕಿನ ಗೊತ್ತುಪಡಿಸಿದ ಶಾಖೆಗಳ ಗಮನಕ್ಕೆ, ತಿಳುವಳಿಕೆಗೆ ಮತ್ತು ಅನುಪಾಲನೆಗಾಗಿ ತರತಕ್ಕದ್ದು.

5. ದಯವಿಟ್ಟು ಈ ಸ್ವೀಕೃತಿಯನ್ನು ದೃಢೀಕರಿಸಿ.

ತಮ್ಮ ವಿಶ್ವಾಸಿ
(ಬಿ ಬಿ ಸಂಗ್ಮ)
ಪ್ರಧಾನ ವ್ಯವಸ್ಥಾಪಕರು